837

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 277.

ಮೃತಪಟ್ಟೀ ಕಲ್ಲಹಳ್ಳಿ ದೇವರಾಜೇ ಅರಸಿನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೇವಾಜಂಮ್ಮಣೀಯವರು, ಮೃತಪಟ್ಟ ಸದರೀ ದೇವರಾಜೇ ಅರಸಿನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ದೇವಾಜಮ್ಮಣೀಯವರು ಸದರೀ ವಾಸಸ್ಥರಾಗಿ ಮೃತಪಟ್ಟ ದೇವರಾಜೇ ಅರಸಿನವರ ಜಿಂದಗಿ ಬಗ್ಯಾಗಿ ಬರತಕ್ಕ 2,000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕ್ಕೆಟ್ ಬ್ಯೆ ಈ ಕೋರ್ಟಿಗೆ ಟಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದೇವಾಜಂಮ್ಮಣೀಯವರ ಅರ್ಜಿಯನ್ನು 1889ನೇ ಇಸವಿ ಡಿಸಂಬರ್ ತಿಂಗಳು ತಾರೀಖು 13ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವಾರಾಜೇ ಅರಸಿನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ನವಂಬರ್ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇವಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿವಿಜ್.

ಪ್ರೆಸಿದ್ಧ ಪತ್ರಿಕೆ.

ತಾರೀಖು 12ನೇ ನವಂಬರ್ 1889.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ತಿಳಿಯಪಡಿಸುವದೇನಂದರೆ,—ಹೆಗ್ಗಡದೇವನಕೋಟೆಯಲ್ಲಿ ಹೊಸದಾಗಿ ತಯಾರಾಗತಕ್ಕ ತಾಲ್ಲೂಕು ಕಚ್ಚೇರಿ ಕಾವಗಾರಿ ಕಂಟ್ರಾಕ್ಟಿಗಾಗಿ ಮೊಹರಾಗಿ ಬರುವ ದರಖಾಸ್ತುಗಳನ್ನು ಮೈಸೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಬರುವ ಡಿಸಂಬರ್ 3ನೇ ತಾರೀಖು ಪರಿಯಂತರ ಹಿಡಿಯಲ್ಪಡುವದು.

ಸುಮಾರು ಅಂದಾಜು ಪರಿಮಾಣವನ್ನು ಈ ಕೆಳಗೆ ನಮೂದಿಸಿ ಯಿದೆ ಈ ಪರಿಮಾಣವು ಗೊತ್ತಾದ್ದಲ್ಲಾ, ಕಾವಗಾರಿಯು 1891ನೇ ಇಸವಿ ಸೆಪ್ಟಂಬರ್ ಅಖೈರಿನಲ್ಲಿ ಪೂರೈಸತಕ್ಕದ್ದು.

2. ಸ್ಪೆಸಿಫಿಕೇಷನ್ ಅಂದಾಜು ಮತ್ತು ಪರತ್ತು ಇತರ ಸಂಗತಿಗಳನ್ನು ಸಹ ದಿವಿ 11 ಘಂಟೆ ಲಾಗಾಯ್ತು ಸಾಯಂಕಾಲ 5 ಘಂಟೆ ವರಿಗೆ ಮೈಸೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಪಡೆಯಬಹುದು. ಬಾಬುವಾರ್ ಕೆಲಸವನ್ನು ಯಾವ ಯಾವ ದರದಲ್ಲಿ ನಡಿಸಲ್ಪಡುವದೋ ಅದನ್ನು ತೋರಿಸಿ ಕೆಳಗೆ ಕೊಟ್ಟು ಯಿರುವ ಫಾರಮಿನಂತೆ ಬಂದು ಪಟ್ಟಿ ತಯಾರಿಯಿಂದ ದರಖಾಸ್ತಿನೊಡನೆ ಕಳುಹಿಸಿಕೊಡಬೇಕು.

4. ಪ್ರತಿ ದರಖಾಸ್ತುಗಳೂ ಪ್ರೊನೋಟ್ ಮೂಲಕವಾಗಲಿ ವ ನಗದಾಗಲಿ 200 ರೂಪಾಯಿ ಡಿಪಾಜಿಟನ್ನು ವಡಗೂಡಿ ಯಿರಬೇಕು. ಮತ್ತು ಹೆಗ್ಗಡದೇವನಕೋಟೆಯಲ್ಲಿ ಹೊಸದಾಗಿ ತಯಾರಾಗುವ ತಾಲ್ಲೂಕು ಕಚ್ಚೇರಿ ಕಾವಗಾರಿ ದರಖಾಸ್ತುಯೆಂತ ಲಿಫಾಫೇಮೇಲೆ ಬರಯಿರಬೇಕು. ಹೀಗೆ ಯಿಲ್ಲದೆ ಖರುವ ದರಖಾಸ್ತುಳನ್ನ ತಿರಸ್ಕರಿಸಲ್ಪಡುವದು.

5. ದರಖಾಸ್ತುಗಳನ್ನ ಅಂಗೀಕರಿಸತಕ್ಕದ್ದು ಚೀಫ್ ಇಂಜನಿಯರ್ ಸಾಹೆಬರವರದಾಗಿ ಯಿರ್ಲೆ ಅವರು ಕಮ್ಮಿ ದರ ವ ಇತರ ದರಖಾಸ್ತನ್ನು ಮಂಜೂರ್ಮಾಡುವದಕ್ಕೆ ವ ದರಖಾಸ್ತನ್ನು ಅನಂಗೀಕರಿಸುವದಕ್ಕೆ ಕಾರಣವನ್ನ ಹೇಳುವದಕ್ಕೆ ಬದ್ಧರಾಗಿ ಯಿರುವದಿಲ್ಲ

6. ದರಖಾಸ್ತು ಮಂಜೂರ್ಮಾಡಿದ 8 ರೋಜುಗಳ ಒಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡನ್ನ ಬರದುಕೊಡತಕ್ಕದ್ದು ಅವಶ್ಯವಾಗಿ ಯಿದೆ ಹೀಗೆ ಮಾಡದಿರುವ ಸಂದರ್ಭದಲ್ಲಿ ದರಖಾಸ್ತು ರದ್ದು ಆದಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿಪಾಜಿಟ್ ಮೊಬಲನ್ನ ಹೋಗಲಾಡಿಸಿ ಕೊಳ್ಳುವನು.

7. ಯಾವ ದರಖಾಸ್ತು ಮಂಜೂರ್ಮಾಡಲ್ಪಡುವದೋ ಅಂಥಾ ದರಖಾಸ್ತುದಾರನ ಹೆಸರನ್ನ ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸ್ ನೋಟಿಸ್ ಬೋರ್ಡಿನಲ್ಲಿ ಐಯೆಂಪ ಚಿಕಟಾಯಿಸಲ್ಪಡುವದು. ದರಖಾಸ್ತು ಮಂಜೂರಾಯಿತು ವ ಅನಂಗೀಕರಿಸಲ್ಪಟ್ಟಿತೆ ಯೆಂದು ಬರುವ ಪ್ರಶ್ನೆಗಳಿಗೆ ಜವಾಬು ದೊರಿಯಲಾರದು.

8. ದರಖಾಸ್ತುಗಳ ವೈಕಿ ಬಂದು ದರಖಾಸ್ತು ಮಂಜೂರಾದ ಹೊರ್ಲೆ ಅನಂಗೀಕಾರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸ್ ಮಾಡಲ್ಪಡುವದು.

ಬಾಬುವಾರು.	ಅಂದಾಜಿಗೆ.	ದರ.	ಪರಿಮಾಣ.
ಮಟ್ಟು ಖೋದಿ ಕೆಲಸ	ಸಲೆಗಜ		459
ಮಟ್ಟು ಭರ್ತಿಖೋದಿ ವುಪಯೋಗಿಸವೇಕು	ಡಿಟೋ		320
ಕಾಡುಕಲ್ಲು ಗಾರೇಕೆಲಸ	ಸಲೆಅಡಿ		11010
ಈಟಿಗಟ್ಟಿ	ಡಿಟೋ		23278
ಡಿಟೋ ಕರ್ಮಾಕೆಲಸ	ಡಿಟೋ		498
ಕಲ್ಲು ಜಪ್ಪಡಿ	ಚದರ ಅಡಿ		2683
ಭೂಮಿಗೆ ವಜ್ರಗಾದೆ	ಸಲೆಅಡಿ		1567
ತ್ಯಾಗದ ಮರದ ಬಾಗಿಲು ಕಂಪ್ಲೀಟ್.	ಚದರ ಅಡಿ		484
ಕಿಟಕಿಗಳು	ಡಿಟೋ		281
ಮೇಲಾಗ ಕನ್ನಡಿ ಕಿಟಕಿಗಳು	ಡಿಟೋ		72
ಕಬ್ಬಿಣದ ಸಲಾಕಿನಿಕ ರಕ್ಕೆ ಕಿಟಿಗಳು	ಡಿಟೋ		120
ಖಜಾನೇ ಕೊಠಡಿ ಬಾಗಿಲುಗಳು	ಡಿಟೋ		23
ಕಬ್ಬಿಣದ ಸಲಾಕಿಯೊಡನೆ ಹವಾ ಕಿಟಿಗಳು	ಡಿಟೋ		59
ಮುಂಗೈಸಾಲೆ ಹಂತಕ್ಕೊನ್ಕರ ಕಲ್ಲುಗಳು	ಸಂಖೆ		6
ಮರದ ಬ್ರಾಕೆಟ್ಸಳನ್ನು ಯಿರಿಸುವದಕ್ಕೊನ್ಕರ ವರಟಕೆತ್ತನೆ ಕಲ್ಲು.	ಡಿಟೋ		92
ಸಾದಾ ಕಾರನೀಸಯಾನೆ ಚಿತ್ರ ಕೆಲಸ ..	ಲಾಂಬಿ ಅಡಿ		220
ಕಾರನೀಸ ಕೆಲಸ	ಡಿಟೋ		146
ತ್ಯಾಗದ ಮರಕೆಲಸ	ಸಲೆಅಡಿ		686
ತ್ಯಾಗದ ರೀಪರಸಪಟ್ಟು ಮತ್ತು ಮಂಗಳೂರ ಅವ್ವಲ್ ಕ್ವಾಸಹೆಂಚು ಹಾಕಿದ ಮೇಲೆ ಜಾವಣಿ	ಚದರ		110·96
ಪಕ್ಕ ತಾರ್	ಡಿಟೋ		1·56
ಸುಂಣದ ಗಿಲಾವು	ಡಿಟೋ		303·12
ತ್ಯಾಗದ ಮರದ ಚಿತ್ರಗೆಲಸ ಸೂರಪಟ್ಟು	ಲಾಂಬಿ ಅಡಿ		399
ಡಿಟೋ ಡಿಟೋ 12 ಅಂಗುಲ ಆಳ ೪ ಅಂಗುಲ ಅಂದ ..	ಡಿಟೋ		332
ಸೂರಪಟ್ಟು ನುಧ್ಯದ ಫಳಿಕಂಬಿ	ಸಂಖೆ		7
ಸುಂಣ ಮತ್ತು ಬಂಣದ ಕೆಲಸ	ಚದರ		303 12
ತ್ಯಾಗದಮರದ ಪಲಿಗೆ ಕೆರ್ವೆ ೩ ಅಂಗುಲ ಮಂಡ	ಡಿಟೋ		11·05
ಸೂರಶಾವಾರಗಳಿಗೆ ತವರದ ದೋಣಿ ಯಿಡುವದು	ಲಾಂಬಿ ಅಡಿ		106
ಬಂಣ ಕೆಲಸ	ಚದರ		14·14
ಮರದೆಂಣೆ ಕೆಲಸ	ಡಿಟೋ		87·74
ಬಿದರಚಾವಿ ಪನ್ನಿಪ್ಪೆಯಿಂದ ಮಾಡಿದ್ದು	ಡಿಟೋ		26·86
ರಿಕಾರ್ಡ್ ರಾಕಸಯಾನೆ ಗಡಗಂಟಿಗಳು	ಮೊತ್ತಾ ರೂ.		
ವೈಟ್ ಆಂಟ್ ಕಂಪೊಜಿಷ್ಟ್	ಚದರ		19·29
ಗಾರೇಬಚ್ಚಲು	ಸಂಖೆ		2
ಕಂಪಾಂಡ್ ಸುತ್ತಲೂ ದೊಡ್ಡ ಚರಂಡಿ ಮತ್ತು ಗೇಟ್ ಬಾಗಲ್ ಚರಂಡಿ ವಗೈರೆ ಕಂಪ್ಲೀಟ್	ಮೊತಾ ರೂ.		
ಕೈದಿಗಳು ನಿಲ್ಲತಕ್ಕದ್ದಕ್ಕೊನ್ಕರ ಡಾಕಯಾನೆ ಕಟಕಟಿ ಮತ್ತು ಸಾಕ್ಷಿಗಳು ನಿಂತುಕೊಳ್ಳುವದಕ್ಕೆ ಪಟ್ಟಿಗೆ	ಡಿಟೊ		
ಕಬ್ಬಿಣದ ಕೆಲಸ	ಡಿಟೋ		
ಸ್ಥಳಕೋಧನೆ	ಡಿಟೋ		

ವಿ. ಹೆಚ್. ಕರವಿ,
ಎಗ್ಜಿಕ್ಯೂಟಿವ ಇಂಜನಿಯರ.

ಸ್ವಂತ ಪ್ರಕಟನೆ.

ನೆಲವಂಗಲದ ಮಂಗಳ ತರಂಗಿಣಿ ದ್ರವ್ಯಸಹಾಯ ನಿಧಿ ಕಂಪೆನಿ ಲಿಮಿಟೆಡ್ ಆಫಿಸಿನಿಂದ.

ಇದರಿಂದ ಕಂಪೆನಿಮಜಕೂರ ವಿಸಿಷ್ಟ ಷೇರ್ ಹೋಲ್ಡರಗಳಿಗೆ ಕೃತಪಡಿಸುವದೇನಂದರೆ,—ಕಂಪೆನಿ ಅಭಿವೃದ್ಧಿ ಯೋಚಿಸಲಾಗಿ ಉತ್ತರೋತ್ತರ ಬಹಳ ಅನಂಗತಗಳಿಗೆ ಕಾರಣವಾಗುತ್ತೆಂದು ಡೈರೆಕ್ಟರವರುಗಳು ಯೋಚಿಸುತ್ತಾರೆ. ಈ ಬಗ್ಯೆ 1890ನೇ ಜನವರಿ 8ನೇ ತಾರೀಖಿನ ಬೆಳಿಗ್ಯೆ 10 ಘಂಟೇಯಿಂದ 4 ಘಂಟೆ ವರಿಗೆ ನೆಲವಂಗಲದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಜನರಲ್ ಮೀಟಿಂಗ್ ನಡಿಸುತ್ತಾದ್ದರಿಂದ ಸರ್ವರೂ ದಯವಾಡಿ ವೈಡವ ಮಾಡತಕ್ಕದ್ದು. ಲಿಕ್ವಿಡೇಟರನ್ನ ಮೊಕರರ್ ಮಾಡುವದಕ್ಕೂ ಯೋಚನೆ ತೀರ್ಮಾನ ಮಾಡಬೇಕು, ಸದರೀ ಮೀಟಿಂಗಿಗೆ ಬಾರದೆ ಯಿರುವಂತಾವರು ವಿಾಟಿಂಗಿನ ತೀರ್ಮಾನ ಒಪ್ಪಿಕೊಳ್ಳಬೇಕು.

ತಾರೀಖು 4ನೇ ಡಿಕಂಬರ್ 1889ನೇ ಇಸವಿ. ಯಲ್. ರಾಮಚಂದ್ರಯ್ಯ ಪ್ರೆಸಿಡೆಂಟ್.